ಎಸ್ . ಸಿ. ನಂ.8 /2024 ಪಿ ಡಬ್ಲುಃ 12

<u>ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮೇರೆಗೆ ಪ್ರಮಾಣೀಕರಿಸಲಾಯಿತು . ದಿ:- 19-06 -2025</u>

<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ</u>

ಆರೋಪಿತನ ಮನೆಯಲ್ಲಿ ಗಲಾಟೆಯಾಗಿದ್ದ ಶಬ್ದವನ್ನು ಕೇಳಿ ಬಸ್ಸಮ್ಮ ಇವಳು ಆರೋಪಿತನ ಮನೆಗೆ ಹೋಗಿದ್ದಳು. ಬಸ್ಸಮ್ಮ ಇವಳು ಸ್ವಲ್ಪ ಸಮಯದ ನಂತರ ಆರೋಪಿ ತನ್ನ ಬೈಕ್ ಮೇಲೆ ಹೊರಗಡೆ ಹೋಗಿದ್ದನ್ನು ನೋಡಿದ್ದಳು. ಆಗ ಬಸ್ಸಮ್ಮ ಇವಳು ಆರೋಪಿತನ ಮನೆಗೆ ಹೋದಳು ಅಲ್ಲಿ ಹೋಗಿ ನೋಡಲಾಗಿ ನನ್ನ ತಂಗಿಯ ಮಗಳು ನೇತ್ರಾ ಇವಳು ಹಾಲ್‌ನಲ್ಲಿ ಮಲಗಿಕೊಂಡಿದ್ದಳು. ಬಸ್ಸಮ್ಮ ಇವಳು ಆರೋಪಿತನ ಮನೆಯ ಬೆಡ್ ರೂಮ್ ಗೆ ಹೋಗಿ ನೋಡಲಾಗಿ ನನ್ನ ತಂಗಿ ಹೂಲೆಮ್ಮ ಇವಳು ನೇಣು ಹಾಕಿದ ಸ್ಥಿತಿಯಲ್ಲಿ ಇದ್ದಳು. ಈ ವಿಚಾರ ನನಗೆ ರಾತ್ರಿ 9.30 ಗಂಟೆಗೆ ಬಸ್ಸಮ್ಮ ಇವಳು ಕರೆ ಮಾಡಿ ಹೇಳಿದ್ದರಿಂದ ಈ ವಿಷಯ ನನಗೆ ಗೊತ್ತಾಯಿತು. ನಂತರ ನಾನು, ನನ್ನ ಅಣ್ಣ ಅಂಜಿನಪ್ಪ, ಬಸವರಾಜಪ್ಪ, ಹನಮಂತಪ್ಪ, ಮಾರಪ್ಪ ಹಾಗೂ ಊರಿನ ಜನ ನಮ್ಮ ಗ್ರಾಮ ಬಂಡ್ರಿಯಿಂದ ಮುರಾರಿಪುರಕ್ಕೆ ಹೋದೆವು. ಮುರಾರಿ ಪುರದಲ್ಲಿ ಆರೊಪಿತನ ಮನೆಗೆ ಹೋಗಿ ನೊಡಲಾಗಿ ನನ್ನ ತಂಗಿ ಹೂಲೆಮ್ಮ ಮನೆಯ ಮೇಲ್ಚಾವಣಿಯ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಇದ್ದಳು. ಆ ಸಮಯದಲ್ಲಿ ಆರೋಪಿತನು ಮನೆಯಲ್ಲಿ ಇರಲಿಲ್ಲ. ನಂತರ ನಾನು ಸಂಡೂರು ಪೊಲೀಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ದೂರನ್ನು ನೋಡುತ್ತಿದ್ದು ಅದನ್ನು ನಿಪಿ-16 ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ನಿಪಿ-16 ದೂರನ್ನು ಪೊಲೀಸರು ನನ್ನ ಹೇಳಿಕೆಯ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ. ಆರೋಪಿತನು ನನ್ನ ತಂಗಿಯನ್ನು ಕೊಲೆ ಮಾಡಿದ್ದಾನೆ ಎಂದು ನಾನು ದೂರನ್ನು ಸಲ್ಲಿಸಿರುತ್ತೇನೆ. ನನ್ನ ತಂಗಿಯ ಕುತ್ತಿಗೆಗೆ ಇದ್ದ ಮರೂನ್ ಬಣ್ಣದ ಸೀರೆಯನ್ನು ಈಗ ನ್ಯಾಯಲಯದ ಮುಂದೆ ನೋಡಿ ಗುರುತಿಸಿದ್ದೇನೆ. ಸದರಿ ಸೀರೆಯನ್ನು ಮು.ಮಾ.1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದ ಸಮಯ ಕೇಳುತ್ತಿದ್ದು 500 ರೂ. ಖರ್ಚಿನೊಂದಿಗೆ ಮುಂದೂಡಲಾಯಿತು.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ . ಹೇ. ಕೆ . ಸರಿ ಇದೆ .

C/c, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ .